BCU NEWS

# ಜ್ಞಾನ ಜ್ಯೋತಿ

BCU CHRONICLE

# JNANA JYOTHI

ಆಗು ನೀ ಅನಿಕೇತನ
BE BOUNDLESS

BCU RADIO

Volume: VI | Edition:VIII | BENGALURU | Date: July, 30-07-2023

https://www.bcumcj.com | For Private Circulation Only | @BCUMCJ


# ಕೆಂಪೇಗೌಡ ಕಾರಿಡಾರ್‌ಗೆ ಸಿದ್ಧತೆ

## ಲಾಲ್‌ಬಾಗ್ ಗಡಿಗೋಪುರದಿಂದ ಕೆಂಪಾಂಬುಧಿ ಕೆರೆ ಗಡಿಗೋಪುರ ನಡುವಿನ ಪ್ರದೇಶ

**ಬೆಂಗಳೂರು:** ಬೆಂಗಳೂರು ನಗರದ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ನಾಡಪ್ರಭು ಕೆಂಪೇಗೌಡ ಪಾರಂಪರಿಕ ಕಾರಿಡಾರ್ ರೂಪಿಸುವ ನಿಟ್ಟಿನಲ್ಲಿ ಬಿಬಿಎಂಪಿ ಸಿದ್ಧತೆ ಮಾಡಿಕೊಳ್ಳುತ್ತಿದೆ.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಬರುವ ಲಾಲ್‌ಬಾಗ್ ಗಡಿ ಗೋಪುರ ಹಾಗೂ ಕೆಂಪಾಂಬುಧಿ ಕೆರೆ ಗಡಿ ಗೋಪುರಗಳ ನಡುವಿನ 12 ಕಿ.ಮೀ ಪ್ರದೇಶದಲ್ಲಿ ನಾಡಪ್ರಭು ಕೆಂಪೇಗೌಡ ಪಾರಂಪ-ರಿಕ ಕಾರಿಡಾರ್ ಮಾಡಲು ಯೋಜನೆ ರೂಪಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಲಯ ಆಯುಕ್ತ ಜಯರಾಮ್ ರಾಯಪುರ ಅವರು ಕಾಲ್ನಡಿಗೆ ಮೂಲಕ ಸ್ಥಳ ಪರಿಶೀಲನೆ ನಡೆಸಿ, ಕಾರಿಡಾರ್ ಅನ್ನು ಯಾವ ಮಾದರಿಯಲ್ಲಿ ರೂಪಿಸಬೇಕು, ಅದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದರ ಕುರಿತು ಅಧಿಕಾರಿಗಳ ಜೊತೆ ವಿವಿಧ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.



ನಾಡಪ್ರಭು ಕೆಂಪೇಗೌಡರ ಪಾರಂಪರಿಕ ಮೂರ್ತಿ ಸ್ಥಾಪನೆ.

ಕಾರಿಡಾರ್ ರೂಪಿಸುವ ಸಲುವಾಗಿ ನುರಿತ ತಜ್ಞರ ಹಾಗು ನಾಗರಿಕರ ಸಲಹೆ ಪಡೆದು ವಿಸ್ಕೃತ ಯೋಜನಾ ವರದಿ(ಡಿಪಿಆರ್) ತಯಾರಿಸಲು ಅಧಿಕಾ-ರಿಗಳಿಗೆ ಸೂಚನೆ ನೀಡಲಾಗಿದೆ. ವರದಿ ಸಿದ್ಧಪಡಿಸಿದ ಬಳಿಕ ಶೀಘ್ರವಾಗಿ ಕಾ-ರಿಡಾರ್ ಅನುಷ್ಠಾನಗೊಳಿಸಲಾಗುವುದು.

ನಾಡಪ್ರಭು ಕೆಂಪೇಗೌಡ ಪಾರಂಪ-ರಿಕ ಕಾರಿಡಾರ್ ರೂಪಿಸುವ ಸಲುವಾಗಿ ಸಾಗಿದ ಕಾಲ್ನಡಿಯು ಲಾಲ್‌ಬಾಗ್ ವೆಸ್ಟ್ ಗೇಟ್‌ನಿಂದ ಪ್ರಾರಂಭವಾಗಿ, ಲಾಲ್‌ಬಾಗ್ ಆವರಣ, ಲಾಲ್‌ಬಾಗ್‌ನಲ್ಲಿರುವ ಗಡಿ ಗೋಪುರ, ಲಾಲ್ ಬಾಗ್ ಸಿದ್ದಾಪುರ ಗೇಟ್, ಆಶೋಕ ಪಿಲ್ಲರ್ ಆಯುಕ್ತ ಜಯರಾಮ್ ರಾಯಪುರರಿಂದ ಕಾಲ್ನಡಿಗೆ ಮೂಲಕ ಸ್ಥಳ ಪರಿಶೀಲನೆ ವೃತ್ತ, ಕನಕನ ಪಾಳ್ಯ ಮುಖ್ಯ ರಸ್ತೆ, ಎಂ.ಎನ್ ಕೃಷ್ಣಾರಾವ್ ಪಾರ್ಕ್, ಗಾಂಧಿ ಬಜಾರ್, ದೊಡ್ಡ ಬಸವಣ್ಣ ದೇವಸ್ಥಾನ, ರಾಮಾಂಜನೇಯ ಗುಡ್ಡ ದೇವಸ್ಥಾನ, ಗವಿಗಂಗಾಧರೇಶ್ವರ ದೇವಸ್ಥಾನ, ಕೆಂಪಾಂಬುದಿ ಕೆರೆ ಬಳಿಯ ಗಡಿ ಗೋಪುರ, ರಾಮಕೃಷ್ಣ ಆಶ್ರಮ, ನ್ಯಾಷನಲ್ ಕಾಲೇಜು, ಮಕ್ಕಳಕೂಟ, ಟಿಪ್ಪು ಬೇಸಿಗೆ ಅರಮನೆ, ಬೆಂಗಳೂರು ಕೋಟೆ, ಸುಬ್ರಮಣ್ಯ ಸ್ವಾಮಿ ದೇವಸ್ಥಾನ, ಸಜ್ಜನ್ ರಾವ್ ವೃತ್ತ, ವಿವಿ ಪುರಂ ಫುಡ್ ಸ್ಟ್ರೀಟ್ ಮೂಲಕ ಲಾಲ್ ಬಾಗ್ ವೆಸ್ಟ್ ಗೇಟ್ ವರೆಗೆ ಪಾರಂಪರಿಕ ಸ್ಥಳಗಳನ್ನು ವೀಕ್ಷಣೆ ಮಾಡಿದರು. 12 ಕಿ.ಮೀ ಪ್ರದೇಶದ ನಿಖರ ಮಾರ್ಗದಲ್ಲಿ ಸಂಚರಿಸಿ, ಕಾರಿಡಾರ್ ರೂಪಿಸುವ ಮಾರ್ಗ, ತಂಗುದಾಣಗಳ ನಿರ್ಮಾಣ, ಪಾರಂಪರಿಕ ಸ್ಥಳಗಳ ಗುರುತು, ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಲಾಗಿದೆ.

ಈ ವೇಳೆ ವಲಯ ಮುಖ್ಯ ಅಭಿಯಂತರರಾದ ರಾಜೇಶ್, ಅಧಿಕಾ-ರಿಗಳು, ತಂತ್ರಜ್ಞರು, ಸ್ಥಳೀಯ ನಾಗರಿಕರು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

# ಅಬ್ಬರ ತಗ್ಗಿದರೂ ನಿಲ್ಲದ ನಡುಕ

**ಕಳೆದ ಹತ್ತು ದಿನಗಳಿಂದ ಬಿಟ್ಟೂಬಿಡದೇ ಸುರಿದ ಮಳೆ ಶುಕ್ರವಾರ ತುಸು ವಿರಾಮ ಪಡೆಯಿತು. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ವರುಣನ ಅಬ್ಬರ ತಗ್ಗಿದೆ. ಬೆಂಗಳೂರಿನಲ್ಲಿ ದಿನವಿಡೀ ಬಿಸಿಲು ಮತ್ತು ಮೋಡಗಳ ನಡುವೆ ಪೈಪೋಟಿ ಬೀದರ್ ಹೊರತುಪಡಿಸಿ ಒಳನಾಡಿನಲ್ಲೂ ಮಳೆ ವಿರಾಮ ಪಡೆದಿದ್ದು, ಕೃಷಿ ಚಟುವಟಿಕೆಗಳು ಚುರುಕು ಪಡೆದವು.**

**ಸುಬ್ರಹ್ಮಣ್ಯ:** ಎರಡು ದಿನಗಳಿಂದ ಮಳೆ ಕಡಿಮೆಯಾಗಿದ್ದು, ಶುಕ್ರವಾರ ಸುಬ್ರಹ್ಮಣ್ಯ ಪರಿಸರದಲ್ಲಿ ಸಾಧಾರಣ ಮಳೆಯಾಗಿದೆ. ಕಳೆದ ಆರು ದಿನಗಳಿಂದ ಮುಳುಗಡೆಯಾಗಿದ್ದ ಕುಮಾರಧಾರ: ಸ್ನಾನಘಟ್ಟ ಶುಕ್ರವಾರ ತೆರವಾಗಿದೆ. ಭಾರಿ ಮಳೆಯಿಂದಾಗಿ ಕಳೆದ ಶನಿವಾರ ಸ್ನಾನಘಟ್ಟ ಮುಳುಗಡೆ ಯಾಗಿತ್ತು. ಬಳಿಕ ಹೆದ್ದಾರಿಗೂ ನೀರು ನುಗ್ಗಿತ್ತು. ಒಂದು ವಾರ ಬಳಿಕ ಶುಕ್ರವಾರ ನದಿಯಲ್ಲಿ ನೀರು ಇಳಿಕೆಯಾಗಿದ್ದು, ಸ್ನಾನಘಟ್ಟದಿಂದ ನೀರು ಇಳಿದು ಮೆಟ್ಟಿಲುಗಳವರೆಗೆ ಇದೆ. ಕೆಲ ದಿನಗಳಿಂದ ತುಂಬಿ ಹರಿಯುತ್ತಿದ್ದ ಕುಮಾರಧಾರಾ ನದಿ ಹರಿವು ಕೊಂಚ ಇಳಿಮುಖಗೊಂಡಿದೆ. ಈಗ ಭಕ್ತರು ಸ್ನಾನಘಟ್ಟದ ಬಳಿ ಒಂದು ಬದಿಯಲ್ಲಿ ತೀರ್ಥಸ್ನಾನ ನೆರವೇರಿಸಬಹುದಾಗಿದೆ.

### ಜಲಪಾತಗಳ ದರ್ಶನ ನಿರ್ಬಂಧ

**ಬೆಳ್ತಂಗಡಿ(ದ.ಕ.):** ಕುದುರೆಮುಖ ವನ್ಯಜೀವಿ ವಿಭಾಗದ ವ್ಯಾಪ್ತಿಯ ಜಲಪಾತ, ಚಾರಣ ಪ್ರದೇಶಗಳಿಗೆ ಪ್ರವೇಶ ನಿರ್ಬಂಧ ವಿಧಿಸಲಾಗಿದ್ದರೂ, ಪ್ರವಾಸಿಗರು ಆಗಮಿಸುತ್ತಿದ್ದಾರೆ. ತಾಲೂಕಿನಲ್ಲಿ ವಿಪರೀತ ಮಳೆಯಾಗಿದ್ದು, ಜಲಪಾತ, ಚಾರಣ ಪ್ರದೇಶಗಳು ಅಪಾಯಕಾರಿಯಾಗಿವೆ. ಈ ಕಾರಣದಿಂದ ಜು.25ರಿಂದ ತಾತ್ಕಾಲಿಕ ನಿರ್ಬಂಧವನ್ನು ಇಲಾಖೆ ವತಿಯಿಂದ ಹೇರಲಾಗಿದೆ. ತಾಲೂಕಿನ ಪ್ರಮುಖ ಜಲಪಾತಗಳಾದ ಕಡಮಗುಂಡಿ, ಎರ್ಮಾಯಿ, ಬಂಡಾಜೆ, ಬೊಳ್ಳೆ, ಎಳನೀರು ಮೊದಲಾದ ಜಲಪಾತ ಪ್ರದೇಶಗಳಿಗೆ ಪ್ರವೇಶ ನಿರ್ಬಂಧದ ಆದೇಶದ ಕುರಿತು ಅರಿವಿಲ್ಲದ ಹೊರ ಜಿಲ್ಲೆಗಳ ಅನೇಕ ಪ್ರವಾಸಿಗರು ಆಗಮಿಸುತ್ತಿದ್ದಾರೆ.




# ಸಪ್ತವಿವಿಗಳ ಸಮಸ್ಯೆಗಳ ಈಡೇರಿಸುವತ್ತ ಗಮನ ನೀಡಲಿ

## ಸಂಪಾದಕೀಯ

ರಾಜ್ಯದಲ್ಲಿನ ಪ್ರತಿ ಜಿಲ್ಲೆಯಲ್ಲಿಯೂ ಒಂದು ವಿಶ್ವವಿದ್ಯಾನಿಲಯ ಬೇಕು ಎಂಬ ಉದ್ದೇಶದಿಂದ ಹಿಂದಿನ ಸರ್ಕಾರ ರಚಿಸಿದ್ದು ಎಂದಿಗಳು, ತ್ರಿಶಂಕು ಸ್ಥಿತಿಗೆ ತಲುಪಿದ್ದು, ಅತ್ತ ಅನುದಾನವೂ ಇಲ್ಲದೆ, ಇತ್ತ ಸಿಬ್ಬಂದಿಯೂ ಇಲ್ಲದೇ ತೊಳಲಾಡುತ್ತಿವೆ. ಇತ್ತೀಚೆಗಷ್ಟೇ ಅಧಿವೇಶನ ದಲ್ಲೇ ಮಾತನಾಡಿದ್ದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ, ಸುಧಾಕರ ಅವರು, ಅಗತ್ಯವಿಲ್ಲದಿದ್ದರೂ ಹಿಂದಿನ ಸರ್ಕಾರ ಜಿಲ್ಲೆಗೊಂದು ಎಎ ರೂಪಿಸಿ, ಕೇವಲ 2 ಕೋಟಿ ರೂ. ಅನುದಾನ ನೀಡಿ ಹೋಗಿತ್ತು, ಇದ ರಿಂದ ಅಂಥ ಉಪಯೋಗವೇನೂ ಆಗುತ್ತಿಲ್ಲ ಎಂದು ಹೇಳಿದ್ದರು.

ಇದರ ಮಧ್ಯೆಯೇ ಸಪ್ತ ಸ್ಥಿತಿಗತಿಯನ್ನು ಆವ ಲೋಕಿಸಿದಾಗ, ನಿಜಕ್ಕೂ ಈ ವಿವಿಗಳಲ್ಲಿ ಭಾರೀ ಸಮಸ್ಯೆಗಳಿರುವುದು ಕಂಡು ಬಂದಿದೆ. ಪ್ರತಿ ಜಿಲ್ಲೆಗೂ ಒಂದು ವಿವಿ ಇರಬೇಕು, ಉನ್ನತ ಶಿಕ್ಷಣವು ಕೈಗೆಟಕುವಂತಿರಬೇಕು ಎಂಬ ಹಿಂದಿನ ಸರ್ಕಾರದ ಉದ್ದೇಶ ಉತ್ತಮವಾ ದದ್ದೇ. ಆದರೆ, ಎಎ ರೂಪಿಸಿದ ಮೇಲೆ, ಅದಕ್ಕೆ ಸೂಕ್ತ ಅನುದಾನ ನೀಡುವುದರ ಜತೆಗೆ ಬೇಕಾದ ಮೂಲಸೌಕರ್ಯಗಳನ್ನೂ ಒದಗಿಸಬೇಕಾಗಿತ್ತು.

ಹಿಂದಿನ ಸರ್ಕಾರವು ಮಂಡ್ಯ, ಹಾಸನ, ಚಾಮರಾಜನಗರ, ಹಾವೇರಿ, ಕೊಪ್ಪಳ, ಬಾಗಲಕೋಟೆ ಮತ್ತು ಬೀದರ್ ವಿವಿಗಳನ್ನು ಸ್ಥಾಪಿಸಿತ್ತು. 2022ರ ಕೊನೆಯ ಭಾಗದಲ್ಲಿ ಈ ವಿವಿಗಳ ಬಗ್ಗೆ ಘೋಷಣೆ ಮಾಡಲಾಗಿತ್ತು. ವಿಚಿತ್ರವೆಂದರೆ, ಇಂದಿಗೂ ಈ ವಿವಿಗಳಿಗೆ ಇನ್ನೂ ಮಾತೃ ವಿವಿಯಿಂದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ವಿಭಜನೆ ಆಗಿಲ್ಲ. ಕೆಲವು ವಿವಿಗಳಲ್ಲಿ ಕುಲಪತಿ ಮತ್ತು ಕುಲಸಚಿವರ ನೇಮಕವಾಗಿದ್ದರೆ, ಉಳಿದ ಸಿಬ್ಬಂದಿಯ ನೇಮಕಾತಿ ಹಾಗೆಯೇ ನನಗು ದಿಗೆ ಬಿದ್ದಿದೆ. ಇನ್ನೂ ಕೆಲವು ವಿವಿಗಳು ಕೇವಲ ಅತಿಥಿ ಉಪನ್ಯಾಸಕರ ಸಹಾಯದಿಂದ ದಿನ ನೂಕುತ್ತಿವೆ. ಕಟ್ಟಡ, ಕ್ರೀಡಾಂಗಣ, ಗ್ರಂಥಾಲಯ ಸೇರಿದಂತೆ ಇತರೆ ಮೂಲಸೌಕ ರ್ಯಗಳು ಇಲ್ಲದೇ, ಹೊಸದಾಗಿ ಕೋರ್ಸ್ ಆರಂಭಿಸುವಂತೆಯೂ ಇಲ್ಲ. ಕ್ರೀಡಾ ಸೌಲಭ್ಯಗಳಿಲ್ಲದೇ, ವಿವಿಯ ವಿದ್ಯಾರ್ಥಿಗಳು ವಂಚಿತರಾಗು ತ್ತಿದ್ದಾರೆ. ಜತೆಗೆ ಹೊಸ ಸರ್ಕಾರವೂ ಹೊಸ ವಿವಿಗಳ ಕುರಿತಂತೆ ಅಷ್ಟೇನೂ ಆಸಕ್ತಿಯನ್ನೂ ಹೊಂದಿಲ್ಲ, ಹಾಗಂಥ ಈಗಾಗಲೇ ಶುರುವಾಗಿರುವ ವಿವಿ ಗಳನ್ನು ಮುಚ್ಚುವುದಿಲ್ಲ ಎಂಬ ಮಾಹಿತಿ ಇದೆ. ಸದ್ಯದ ಲೆಕ್ಕಾಚಾರದ ಪ್ರಕಾರ, ಇತ್ತೀಚೆಗಷ್ಟೇ ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್‌ನಲ್ಲಿ ಈ ಹೊಸ ವಿವಿಗಳಿಗಾಗಿ ಎಷ್ಟು ಹಣ ಎಂಬುದನ್ನು ಗಮನಿಸಬೇಕಾಗಿದೆ. ಈ ಮಾಹಿತಿ ಇನ್ನೂ ಕುಲಪತಿಗಳು ಮತ್ತು ಕುಲಸಚಿವರ ಗಮನಕ್ಕೆ ಹೋಗಿಲ್ಲ, ಮೀಸಲಾಗಿ ರುವ ಅನುದಾನದ ಲೆಕ್ಕಾಚಾರದಲ್ಲಿ ಮೂಲಸೌಕರ್ಯಗಳನ್ನು ಕೈಗೆತ್ತಿಕೊಳ್ಳ ಬಹುದೇ? ಅಥವಾ ಈಗಿನ ರೀತಿಯಲ್ಲೇ ಇರುವ ಮೂಲಸೌಕರ್ಯ ದಲ್ಲೇ ನಡೆಸಿಕೊಂಡು ಹೋಗುವುದೇ ಎಂಬ ಸಂಗತಿ ಗೊತ್ತಾಗಲಿದೆ. ಈಗಿನ ಮಟ್ಟಿಗೆ ಹೇಳುವುದಾದರೆ, ಹೊಸ ವಿವಿಗಳನ್ನು ಮುಚ್ಚಿ ವಾಪಸ್ ತವರು ವಿವಿಗಳಿಗೆ ವಿಲೀನ ಮಾಡುವ ಸಾಧ್ಯತೆಗಳು ಕಡಿಮೆ ಇವೆ. ಒಮ್ಮೆ ನಿರ್ಧಾರ ತೆಗೆದುಕೊಂಡ ಮೇಲೆ ಅದನ್ನು ವಾಪಸ್ ಮಾಡುವುದು ಕಷ್ಟ ಕರ, ಅಲ್ಲದೆ, ಈ ವಿವಿಗಳಿಗೆ ಕುಲಪತಿ, ಕುಲಸಚಿವರನ್ನು ನೇಮಕವನ್ನೂ ಮಾಡಲಾಗಿದೆ. ಇವರನ್ನು ಮುಂದೇನು ಮಾಡುವುದು ಎಂಬ ಪ್ರಶ್ನೆಗಳೂ ಉದ್ಭವವಾಗುತ್ತವೆ. ಹೀಗಾಗಿ, ರಾಜ್ಯ ಸರ್ಕಾರವು ಹೊಸ ಸಪ್ತ ವಿವಿಗಳ ಅಭಿವೃದ್ಧಿಗೆ ಕೈಜೋಡಿಸಬೇಕಾದ ಅನಿವಾರ್ಯತೆ ಇದೆ. ಇಲ್ಲದಿದ್ದರೆ ಇಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟಾಗುತ್ತದೆ.

# ಅತಿವೃಷ್ಟಿ ಎದುರಿಸಲು ಸಜ್ಜಾಗಲಿ

ರಾಜ್ಯ ಕಾಡುತ್ತಿರುವ ಅನಾವೃಷ್ಟಿಯನ್ನೂ ಗಮನಿಸಲಿ ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಮುಂಗಾರು ಮಳೆ ಕರಾವಳಿ, ಮಲೆನಾಡು ಸೇರಿದಂತೆ ವಿವಿಧ ಭಾಗಗಳಲ್ಲಿ ಅತಿವೃಷ್ಟಿಯ ಅವಾಂತರವನ್ನೇ ಸೃಷ್ಟಿಸುತ್ತಿದ್ದರೂ, ಮಧ್ಯ ಕರ್ನಾಟಕ ಸೇರಿದಂತೆ ಉತ್ತರ–ದಕ್ಷಿಣ ಒಳನಾಡಿನ ಭಾಗದಲ್ಲಿ ಮಳೆ ಕೊರತೆ ಕಾಣಿಸಿಕೊಂಡಿದೆ. ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರ ಕಳೆದ ವಾರ ಬಿಡುಗಡೆ ಮಾಡಿದ ವರದಿ ಅನುಸಾರ, ರಾಜ್ಯದಲ್ಲಿ ಮುಂಗಾರು ವಾಡಿಕೆಗಿಂತ ಶೇ.72ರಷ್ಟು ಕೊರತೆಯಾಗಿತ್ತು. ಇದೊಂದು ರೀತಿ ವಿಭಿನ್ನ ಸ್ಥಿತಿ, ರಾಜ್ಯದ ಒಂದಿಷ್ಟು ಜಿಲ್ಲೆಗಳಲ್ಲಿ ಅತಿವೃಷ್ಟಿಯೂ, ಇನ್ನೂ ಕೆಲವು ಕಡೆ ಅನಾವೃಷ್ಟಿಯೂ ಕಾಡುತ್ತಿದೆ. ಸರಕಾರ ಈ ಎರಡೂ ಪರಿಸ್ಥಿತಿಯನ್ನು ನಿಭಾಯಿಸಬೇಕಿದೆ.

ಕೊಡಗು, ಕರಾವಳಿಯಲ್ಲಿ ಸುರಿಯುತ್ತಿರುವ ಮಳೆ ರಸ್ತೆ ಸಂಪರ್ಕವನ್ನೇ ಕಡಿತಗೊಳಿಸಿದೆ. ಇನ್ನೇಲೆ ಘಾಟಿಗಳಲ್ಲಿ ಸಂಚಾರವೂ ದುಸ್ತರವಾಗುವ ಲಕ್ಷಣಗಳು ಗೋಚರಿಸಿವೆ. ಹಾಸನ, ಕೊಡಗು, ಚಿಕ್ಕಮಗಳೂರು ಭಾಗದಲ್ಲಿ ಭೂ ಕುಸಿತದ ಆತಂಕವೂ ಎದ್ದಿದೆ. ಸಾಮಾನ್ಯವಾಗಿ ಮುಂಗಾರು ಪೂರ್ವದಲ್ಲಿಯೇ ಮಳೆಯನ್ನು ಎದುರಿಸಲು ಜಿಲ್ಲಾಡಳಿತಗಳು ಒಂದಿಷ್ಟು ಸಿದ್ಧತೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ಅತಿಯಾಗಿ ಸುರಿಯುವ ಮಳೆ ತರುವ ಅವಾಂತರಗಳು ಯಾರಿಗೂ ಗೊತ್ತಿಲ್ಲದ ಸಂಗತಿಯೇನಲ್ಲ. ಮೂರಾಲ್ಕು ವರ್ಷಗಳಿಂದ ಇದೆಲ್ಲವೂ ಸಾಮಾನ್ಯವಾಗಿದೆ. ಸದ್ಯ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ, ವಿಶೇಷವಾಗಿ ದಿಲ್ಲಿ, ಮುಂಬಯಿನಂಥ ಮಹಾನಗರಿಗಳಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆ ಸೃಷ್ಟಿಸಿರುವ ಭಯಾನಕ ಸ್ಥಿತಿಯನ್ನು ನಾವೆಲ್ಲರೂ ಗಮನಿಸುತ್ತಲೇ ಇದ್ದೇವೆ.

ಮಳೆ ನೀರು ಚರಂಡಿ, ರಾಜಕಾಲುವೆಗಳನ್ನು ಸನ್ನದ್ಧಗೊಳಿಸದೇ ಇರುವುದು ಸೇರಿದಂತೆ ಮಳೆ ಎದುರಿಸಲು ಯಾವುದೇ ಪೂರ್ವ ಸಿದ್ಧತೆಯನ್ನು ಮಾಡಿಕೊಳ್ಳದೇ ಇರುವುದು ಕೂಡ ದಿಲ್ಲಿಯ ಮಳೆ ಅನಾಹುತಕ್ಕೆ ಕಾರಣ ಎಂದು ವರದಿಗಳು ಹೇಳುತ್ತಿವೆ. ಕರ್ನಾಟಕದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ವಿಪರೀತ ಮಳೆ ಎದುರಿಸಲು ನಮ್ಮ ಜಿಲ್ಲಾಡಳಿತಗಳು ನಿರೀಕ್ಷಿತ ಪ್ರಮಾಣದಲ್ಲಿ ಸಿದ್ಧತೆ ಮಾಡಿಕೊಂಡಿಲ್ಲ. ಸದ್ಯ ಕರ್ನಾಟಕದಲ್ಲಿ ಈಗಷ್ಟೇ ಮುಂಗಾರು ಬಿರುಸುಗೊಂಡಿದೆ. ಆಷಾಢದ ಮಳೆಗಿಂತ ಶ್ರಾವಣದ ಜಡಿ ಮಳೆ ಯಾವತ್ತೂ ಜೋರು. ಆಗಸ್ಟ್‌ನಲ್ಲಿ ಮಳೆ ಇನ್ನಷ್ಟು ಬಿರುಸುಗೊಳ್ಳುವುದು ವಾಡಿಕೆಯಾಗಿದೆ. ಹಾಗಾಗಿ, ಜಿಲ್ಲಾಡಳಿತಗಳು ಈಗಲಾದರೂ ತುರ್ತಾಗಿ ಮಳೆ ಎದುರಿಸಲು ಸಿದ್ಧತೆ ಮಾಡಿಕೊಳ್ಳಲಿ, ಬೆಂಗಳೂರು, ಮಂಗಳೂರು, ಬೆಳಗಾವಿಯಂಥ ನಗರಗಳು ಜಲಾವೃತಗೊಂಡರೆ, ಅದರಿಂದ ಆಗುವ ನಷ್ಟ ಹೇಳತೀರದು. ಅತಿವೃಷ್ಟಿಯದ್ದು ಒಂದು ಸವಾಲಾದರೆ, ಇದೇ ವೇಳೆ ಅನಾವೃಷ್ಟಿಯೂ ಎಚ್ಚರಿಕೆಯ ಗಂಟೆ ರಾಜ್ಯದ 101 ತಾಲೂಕುಗಳ 366 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮಳೆಯೇ ಬೀಳದೇ ಕುಡಿಯುವ ನೀರಿಗೂ ತತ್ವಾರ ಕಾಣಿಸಿಕೊಂಡಿದೆ. ಇಲ್ಲೆಲ್ಲಾ ಬೋರ್‌ಲ್‌ಗಳು ಬರಿದಾಗುವ ಹಂತ ತಲುಪಿದ್ದು, ಟ್ಯಾಂಕರ್ ಮೂಲಕ ನೀರು ಪೂರೈಸುವ ಸ್ಥಿತಿ ಬಂದೊದಗಿದೆ. ಈ ಎಲ್ಲ ಕಡೆಯೂ ಕುಡಿಯುವ ನೀರು ಪೂರೈಕೆಗೆ ಜಿಲ್ಲಾಡಳಿತಗಳು,

# ಪುರಸಭೆ ಆಸ್ತಿ ಪರರ ಪಾಲು, ಸದಸ್ಯರ ಆಕ್ರೋಶ



**ವಿಜಯಪುರ:** ಪುರಸಭಾ ಅಧ್ಯಕ್ಷೆ ವಿಮಲಾಬಸವರಾಜ್ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಸಾಮಾನ್ಯ ಸಭೆ ನಡೆಯಿತು. 23 ಮಂದಿ ಸದಸ್ಯರು ಸಭೆಯಲ್ಲಿ ಪಾಲ್ಗೊಂಡಿದ್ದರು. ಸ್ಥಾಯಿ ಸಮಿತಿ ಅಧ್ಯಕ್ಷರ ಆಯ್ಕೆಯ ವಿಚಾರದ ಕುರಿತು ಸಭೆ ಗಮನಕ್ಕೆ ಏಕೆ ತಂದಿಲ್ಲ ಎಂದು ಸ್ವಪಕ್ಷೀಯ ಆಡಳಿತ ಪಕ್ಷದ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸದಸ್ಯರ ನಡುವೆ ಕೆಲಕಾಲ ಮಾತಿನಚಕಮಕಿ ನಡೆಯಿತು.

ಪಟ್ಟಣದಲ್ಲಿನ ಪುರಸಭೆಗೆ ಸೇರಿದ ಆಸ್ತಿಗಳನ್ನು ಕೆಲವರು ಅಕ್ರಮವಾಗಿ ಕಬಳಿಸಿಕೊಳ್ಳುತ್ತಿರುವುದು ಕಂಡು ಬರುತ್ತಿದ್ದರೂ ಪುರಸಭೆಯ ಅಧಿಕಾರಿಗಳು, ಗಮನಹರಿಸುತ್ತಿಲ್ಲ. ಕೋಟ್ಯಂತರ ರೂಪಾಯಿಗಳು ಬೆಲೆ ಬಾಳುವ ಆಸ್ತಿಗಳು ಪುರಸಭೆಯ ಕೈತಪ್ಪಿ ಹೋಗುತ್ತಿವೆ ಎಂದರು.

ಪಟ್ಟಣದ ಸ.ನಂ.192 ರಲ್ಲಿ ವಾಸದ ಉಪಯೋಗಕ್ಕೆ ಭೂ ಪರಿವರ್ತನೆಯಾಗಿರುವ ಆಸ್ತಿ ಉಳಿಸಿಕೊಂಡು, ಈ ನಂಬರ್ ನಲ್ಲಿ ಅಕ್ರಮವಾಗಿ ತೆರೆದಿರುವ ಎಲ್ಲಾ ಖಾತೆಗಳನ್ನು 15 ದಿನಗಳ ಒಳಗಾಗಿ ವಜಾಮಾಡಬೇಕು ಎಂದು ಸದಸ್ಯರು ಆಗ್ರಹಿಸಿದರು. ಮುಖ್ಯಾಧಿಕಾರಿ ವಿ.ಮೋಹನ್ ಕುಮಾರ್ ಕ್ರಮವಹಿಸುವ ಭರವಸೆ ನೀಡಿದರು.

ಸದಸ್ಯ ವಿ.ನಂದಕುಮಾರ್ ಮಾತನಾಡಿ, ಪುರಸಭೆಯ ಸ್ವತ್ತಿಗೆ ಅಕ್ರಮವಾಗಿ ತಂತಿಬೇಲಿ ನಿರ್ಮಾಣ ಮಾಡಿಕೊಳ್ಳುತ್ತಿರುವ ಬಗ್ಗೆ ಪುರಸಭೆಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಕೂಡಾ ಅದನ್ನು ತಡೆಯುವ ಪ್ರಯತ್ನ ಮಾಡಲಿಲ್ಲ.

ಸದಸ್ಯೆ ಸುಷ್ಮಾಮಹೇಶ್ ಮಾತನಾಡಿ, ಈ ಹಿಂದೆ ಸಾಮಾನ್ಯಸಭೆಯಲ್ಲಿ ಆಗಿರುವ ಸರ್ವಾನುಮತದ ತೀರ್ಮಾನಗಳಲ್ಲಿ ಒಂದನ್ನು ಅನುಷ್ಠಾನಗೊಳಿಸುತ್ತಿಲ್ಲವೆಂದ 'ರು.ಭವ್ಯಮಧು ಮಾತನಾಡಿ,ಪಟ್ಟಣದಲ್ಲಿ ಎಲ್ಲೆಲ್ಲಿ ಪುರಸಭೆ ಸ್ವತ್ತುಗಳು ಒತ್ತುವರಿಯಾಗಿವೆ. ಎನ್ನುವ ಬಗ್ಗೆ ಸರ್ವೆ ಮಾಡಿಸಿ ಎಂದರು.

ಅಧಿಕಾರಿಗಳೇ ನೇರವಾಗಿ ಕಾಮಗಾರಿಮಾಡಿಸಿದರೆ, ಜನರಿಗೆ ಏನು ಉತ್ತರ ಕೊಡಬೇಕು ಎಂದು ಸದಸ್ಯ ಸಿ.ಎಂ.ರಾಮು ಆಕ್ರೋಶ ವ್ಯಕ್ತಪಡಿಸಿದರು.ಪುರಸಭೆ ಅಧ್ಯಕ್ಷೆ ಉಪಾಧ್ಯಕ್ಷ ಎಂ.ಕೇಶವಪ್ಪ, ಮುಖ್ಯಾಧಿಕಾರಿ ವಿ.ಮೋಹನ್ ಕುಮಾರ್, ಸದಸ್ಯರು ಅಧಿಕಾರಿಗಳು ಹಾಜರಿದ್ದರು.

ವಿಜಯಪುರ ಪುರಸಭೆಯಲ್ಲಿ ಬುಧವಾರ ಕರೆಯಲಾಗಿದ್ದ ಸಾಮಾನ್ಯ ಸಭೆಯಲ್ಲಿ ಸದಸ್ಯರ ನಡುವೆ ಮಾತಿನ ಚಕಮು ನಡೆಯಿತು.

# ಭೋರ್ಗರೆತವಾಗಿ ಹರಿಯುತ್ತಿರುವ ಅಪ್ಸರ: ಜಲಪಾತ

**ವಿಜಯ್ ಎಂ,**

**ಹೊನ್ನಾವರ :** ಹೊನ್ನಾವರದ ಸಮೀಪವಿರುವ ಅಪ್ಸರಕೊಂಡ ಜಲಪಾತವು ಸುಲಭವಾಗಿ ಪ್ರವೇಶಿಸಬಹುದಾದ ಪ್ರಯೋಜನವನ್ನು ಹೊಂದಿದೆ, ಪ್ರಾಚೀನ ಕಡಲತೀರದ ಬಳಿ, ಮತ್ತು ಸೂರ್ಯಾಸ್ತದ ನೋಟವನ್ನು ಆನಂದಿಸಲು ಉದ್ಯಾನವನ್ನು ಹೊಂದಿದೆ. ಗೋಕರ್ಣಕ್ಕೆ ಹೋಗುವ ದಾ-ರಿಯಲ್ಲಿರುವ ಅಪ್ಸರಕೊಂಡ ಜಲಪಾತವು ಅಲ್ಲಿಗೆ ಹೋಗುವ ದಾರಿಯಲ್ಲಿ ಪಿಟ್‌ಸ್ಟಾಪ್ ಮಾಡುವವರಿಗೆ ಗುಪ್ತ ರತ್ನವಾಗಿದೆ (ಇನ್ನು ಮುಂದೆ ಅಲ್ಲ). ಇದು ಬೆಂಗಳೂರಿನಿಂದ ಸುಮಾರು 470 ಕಿಲೋಮೀಟರ್ ದೂರದಲ್ಲಿದೆ. ನೀವು ಚಾಲನೆ ಮಾಡಬಹುದು ಅಥವಾ ವಿಮಾನದಲ್ಲಿ ಅಥವಾ ರೈಲಿನಲ್ಲಿ ಹುಬ್ಬಳ್ಳಿಗೆ ಪ್ರಯಾಣಿಸಬಹುದು ಮತ್ತು ಕ್ಯಾಬ್ ಅನ್ನು ಬಾಡಿಗೆಗೆ ಪಡೆಯಬಹುದು ಅಥವಾ ಜಲಪಾತಕ್ಕೆ ಬಸ್ ತೆಗೆದುಕೊಳ್ಳಬಹುದು. ದೇವತೆಗಳು ಇಲ್ಲಿ ಸ್ನಾನ ಮಾಡುತ್ತಿದ್ದರು ಎಂದು ನಂಬಲಾಗಿದೆ ಆದ್ದರಿಂದ ಇದನ್ನು ದೇವತೆಗಳ ಕೊಳ ಎಂದು ಕರೆಯಲಾಗುತ್ತದೆ.

ಹೊನ್ನಾವರ ಪಟ್ಟಣದಿಂದ ಸುಮಾರು ಎಂಟು ಕಿಲೋಮೀಟರ್ ದೂರದಲ್ಲಿ, ಹೆದ್ದಾರಿಯಿಂದ 40 ಮೀಟರ್



**ಮನಮೋಹಕವಾಗಿ ಜನರನ್ನು ಸೆಳೆಯುತ್ತಿರುವ ಅಪ್ಸರಕೊಂಡ**

ಜಲಪಾತವು ಪಚ್ಚೆ ಹಸಿರು ಕೊಳದೊಂದಿಗೆ ಕೊನೆಗೊಳ್ಳುತ್ತದೆ. ಋತುವಿನ ಆಧಾರದ ಮೇಲೆ ಎರಡರಿಂದ ಏಳು ಅಡಿ ಆಳದವರೆಗೆ, ಸ್ನಾನ ಮಾಡಲು ಈಜುಡುಗೆ ಅಥವಾ ಬದಲಾವಣೆಯ ಬಟ್ಟೆಗಳನ್ನು ತನ್ನಿ (ಆದರೆ ಕುಟುಂಬ ಸ್ನೇಹಿಯಾಗಿರಿ, ದಯವಿಟ್ಟು!). ಜಲಪಾತದ ಮೇಲ್ಭಾಗಕ್ಕೆ 15–ನಿಮಿಷದ ಪಾದಯಾತ್ರೆಯು ಹತ್ತಿರದ ಬೀಚ್ ಅನ್ನು ಕಡೆಗಣಿಸುತ್ತದೆ (ಮತ್ತು 20 ನಿಮಿಷಗಳ ನಡಿಗೆಯು ಬೀಚ್ ಆಗಿದೆ). ಕಡಲತೀರವು ಸ್ವಚ್ಛವಾಗಿದೆ, ತುಲನಾತ್ಮಕವಾಗಿ ಅಸ್ಪೃಶ್ಯವಾಗಿದೆ ಮತ್ತು ಕೆಲವು ಒಳ್ಳೆಯ ಓಲ್ 'ಫ್ಲಿಕ್ಕಿಂಗ್ ಮತ್ತು ಫೋಟೋಶೂಟ್‌ಗಳಿಗೆ ಉತ್ತಮವಾಗಿದೆ! ಒಂದು ಬಂಡೆಯೊಂದಿಗೆ ಮತ್ತು ನದಿಯು ಸಮುದ್ರವನ್ನು ಸೇರುವ ಮೂಲಕ, ಇದು ಸಾಕಷ್ಟು ನೋಟವನ್ನು ನೀಡುತ್ತದೆ.

ಈ ಪ್ರದೇಶವನ್ನು ಅರಣ್ಯ ಇಲಾಖೆಯು ನಿರ್ವಹಿಸುತ್ತಿರುವುದರಿಂದ, ಉದ್ಯಾನವನವಿದೆ (ಚಿಒಖ 10 ಪ್ರವೇಶ ಶುಲ್ಕದೊಂದಿಗೆ), ಕೆಲವು ಮೂಲಭೂತ ವಾಶ್‌ರೂಮ್‌ಗಳು ಮತ್ತು ಕ್ಯಾಂಟೀನ್ (ಆದರೂ ನೀವು ನಿಮ್ಮ ಸ್ವಂತ ಆಹಾರವನ್ನು ತೆಗೆದುಕೊಂಡು ಅದನ್ನು ಪಿಕ್ನಿಕ್ ಮಾಡಲು ನಾವು ಶಿಫಾರಸು ಮಾಡುತ್ತೇವೆ). ಮೇಲಿನ ಉದ್ಯಾನವನವು ವೀಕ್ಷಣಾ ಸ್ಥಳದ ಒಂದು ಭಾಗವಾಗಿದೆ, ಅಲ್ಲಿ ನೀವು ಹಗಲಿನಲ್ಲಿ ಸುತ್ತಮುತ್ತಲಿನ (ಮತ್ತು ಭೂದೃಶ್ಯದ ವೈವಿಧ್ಯತೆ) ಹೆಚ್ಚು ಅಥವಾ ಕಡಿಮೆ 360–ಡಿಗ್ರಿ ನೋಟವನ್ನು ಆನಂದಿಸಬಹುದು ಮತ್ತು ಅರೇಬಿಯನ್ ಸಮುದ್ರದ ಮೇಲೆ ನಾಟಕೀಯ ಸೂರ್ಯಾಸ್ತಗಳು ಸಂಜೆ ಬರುತ್ತವೆ. ಉದ್ಯಾನವನವು ವರ್ಷವಿಡೀ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ತೆರೆದಿರುತ್ತದೆ.

---

# ಬೆಂಗಳೂರು ಟ್ರಾಫಿಕ್ ಸಮಸ್ಯೆ ಕಮ್ಮಿಯಾಗುತ್ತಿರುವುದು ಹೇಗೆ?

**ಬೆಂಗಳೂರು ಡಿಸೆಂಬರ್ 03:** ಬೆಂಗಳೂರು ಮಹಾನಗರ ಬೆಳೆದಂತೆಲ್ಲ ಟ್ರಾಫಿಕ್ ಸಮಸ್ಯೆ ಉಲ್ಬಣವಾಗುತ್ತಲೇ ಬಂದಿದೆ. ದೇಶದ ಉಳಿದ ಮಹಾನಗರಿಗಳಿಗೆ ಹೋಲಿಸಿದರೆ, ಬೆಂಗಳೂರಿನಲ್ಲಿ ವಾಹನ ದಟ್ಟಣೆ ಹೆಚ್ಚಿದೆ ಎಂಬ ಆರೋಪಗಳು ಹೊಸದೇನಲ್ಲ. ಬೆಂಗಳೂರನ್ನು 'ಜಾಮ್ ಸಿಟಿ' ಎಂದು ಟ್ರೋಲ್ ಮಾಡಿದ ಜನರು ಕಡಿಮೆ ಸಂಖ್ಯೆಯಲ್ಲಿ ಇಲ್ಲ. ಆದರೆ, ಈಗ ಟ್ರಾಫಿಕ್ ಪರಿಸ್ಥಿತಿ ಹತೋಟಿಗೆ ಬರುವ ನಿಟ್ಟಿನಲ್ಲಿ ಸಾಗಿದೆ. ಜಾಮ್ ಸಿಟಿ ಎಂದು ಟ್ರೋಲ್ ಮಾಡಿದ ಜನರೇ ಬೆಂಗಳೂರಿನಲ್ಲಿ ಕಡಿಮೆ ಆಗುತ್ತಿರುವ ಟ್ರಾಫಿಕ್ ಜಾಮ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಕೆಂಪೇಗೌಡ ಏರ್‌ಪೋರ್ಟ್ ರಸ್ತೆಯಲ್ಲಿ 2 ಗಂಟೆ ಸರಕು ವಾಹನ ನಿಷೇಧ

ಬೆಂಗಳೂರಿನಲ್ಲಿ ಅತೀ ಹೆಚ್ಚು ಟ್ರಾಫಿಕ್ ಜಾಮ್ ಆಗುವ ರಸ್ತೆಗಳಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯೂ ಒಂದು. ಇದು ವಿಮಾನ ನಿಲ್ದಾಣದ ಪ್ರಯಾಣಿಕರಿಗೇ ಅಷ್ಟೇ ಅಲ್ಲದೇ, ಹೆಬ್ಬಾಳ, ಜಕ್ಕೂರು, ಯಲಹಂಕ, ಅರಮನೆ ಮೈದಾನ, ಕೊಡಿಗೇಹಳ್ಳಿ, ಜಿಕೆವಿಕೆ, ದೇವನಹಳ್ಳಿ ಕಡೆ ಸಂಚಾರ ಮಾಡುವ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿತ್ತು. ವಾಹನ ಸವಾರರು ಕನಿಷ್ಠ 20 ರಿಂದ 25 ನಿಮಿಷಗಳಾದರೂ ಟ್ರಾಫಿಕ್ ಜಾಮ್‌ನಲ್ಲಿ ನಿಲ್ಲಬೇಕಾಗಿ ಬರುತ್ತಿತ್ತು. ಈ ಸಮಸ್ಯೆಯನ್ನು ಪರಿಹ–ರಿಸಲು ಬೆಂಗಳೂರಿನ ಟ್ರಾಫಿಕ್ ಪೊಲೀಸರು ಮಾರ್ಗೋಪಾಯವೊಂದನ್ನು ಕಂಡುಕೊಂಡಿದ್ದಾರೆ.

ಪ್ರತಿ ದಿನ ಬೆಳಗ್ಗೆ 8.30 ರಿಂದ 10.30ರವರೆಗೆ ಕೆಂಪೇಗೌಡ ಏರ್‌ಪೋರ್ಟ್ ರಸ್ತೆಯಲ್ಲಿ ಸರಕು ಸಾಗಣೆ ವಾಹನಗಳ ಸಂಚಾರವನ್ನು ನಿಷೇಧಿಸಿದ್ದಾರೆ. ಈ ಕ್ರಮವನ್ನು



ಪ್ರಾಯೋಗಿಕವಾಗಿ ಒಂದು ತಿಂಗಳ ಮಟ್ಟಿಗೆ ಪಾಲಿಸಲು ಆದೇಶಿಸಲಾಗಿದೆ.

ಟ್ರಾಫಿಕ್ ಪೊಲೀಸರ ಈ ಕಠಿಣ ಕ್ರಮದಿಂದ ಹೆಬ್ಬಾಳ ಫ್ಲೈಓವರ್‌ನಲ್ಲಿ ಸಂಚಾರ ದಟ್ಟಣೆ ನಿಯಂತ್ರಣವಾಗಿರುವುದು ಕಂಡುಬಂದಿದೆ ಎಂದು ಟ್ರಾಫಿಕ್ ವಿಶೇಷ ಪೊಲೀಸ್ ಆಯುಕ್ತ ಡಾ.ಎಂ.ಎ.ಸಲೀಂ ತಿಳಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ವಾಹನ ಸವಾರರು ಈ ಹಿಂದೆ ಏರ್‌ಪೋರ್ಟ್ ರಸ್ತೆಯಲ್ಲಿರುವ ಎಸ್ಟೀಮ್ ಮಾಲ್‌ನಿಂದ ಹೆಬ್ಬಾಳ ಫ್ಲೈಓವರ್‌ಗೆ ತಲುಪಲು ಕನಿಷ್ಠ 20 ನಿಮಿಷಗಳನ್ನು ತೆಗೆದುಕೊಳ್ಳುತ್ತಿದ್ದರು. ಕೆಲವೊಮ್ಮೆ 25 ನಿಮಿಷಗಳ ಕಾಲ ನಿಲ್ಲಬೇಕಾಗಿ ಬರುತ್ತಿತ್ತು. ಈಗ ಸರಕು ವಾಹನಗಳ ಮೇಲೆ 2 ಗಂಟೆಗಳ ಕಾಲ ನಿರ್ಬಂಧ ವಿಧಿಸಿದ ನಂತರ, ಸಂಚಾರದ ಸಮಯ ಆರರಿಂದ ಎಂಟು ನಿಮಿಷಗಳಿಗೆ ಕುಸಿದಿದೆ' ಎಂದು ಹೇಳಿದ್ದಾರೆ.

ನಗರದ 10 ಪ್ರಮುಖ ಜಂಕ್ಷನ್‌ಗಳ ಸುಧಾರಣೆಗೆ ಕ್ರಮ ವಾಹಣ ದಟ್ಟಣೆ ತಗ್ಗಿಸಲು ಬೆಂಗಳೂರಿನ 10 ಪ್ರಮುಖ ಜಂಕ್ಷನ್‌ಗಳ ಸುಧಾರಣೆಗೆ ಕ್ರಮವನ್ನು ತೆಗೆದುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ನಗರ ಸಂಚಾರ ವಿಭಾಗಕ್ಕೆ ಐಪಿ–ಎಸ್ ಅಧಿಕಾರಿ ಡಾ. ಎಂ.ಎ.ಸಲೀಂ ಅವರನ್ನು ನೇಮಿಸಲಾಗಿದೆ. ಸಲೀಂ ಅವರು ಆಯುಕ್ತರಾಗಿ ನೇಮಕವಾದ ಬಳಿಕ ಸಂಚಾರ ವ್ಯವಸ್ಥೆಯಲ್ಲಿ ಸುಧಾರಣೆ ತರಲಾಗಿದ್ದು, ವಾಹನ ಸಂಚಾರರ ಮೆಚ್ಚುಗೆಗೆ ಪಾತ್ರವಾಗಿದೆ. ಇತ್ತೀಚೆಗೆ ಬೆಂಗಳೂರಿನ 10 ಪ್ರಮುಖ ಪ್ರದೇಶಗಳಲ್ಲಿ ಟ್ರಾಫಿಕ್ ಜಾಮ್‌ಗೆ ಕಡಿವಾಣ ಹಾಕಲು ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ಸಹ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ದ್ವಿಮುಖ ಸಂಚಾರಕ್ಕೆ ಮುಕ್ತವಾದ ಬಿಟಿಎಂ ಲೇಔಟ್ ರಸ್ತೆ ಬೆಂಗಳೂರು ನಗರದ ಪ್ರಮುಖ ರಸ್ತೆಗಳಲ್ಲಿ 'ನಮ್ಮ ಮೆಟ್ರೋ' ಕಾಮಗಾರಿಗಳು ಭರದಿಂದ ಸಾಗಿವೆ. ಆದ್ದರಿಂದ, ಇಲ್ಲಿ ವಾಹನ ಸಂಚಾರ ದಟ್ಟಣೆ ಅತಿಯಾಗಿದೆ. ಬನಶಂಕರಿ – ಸಿಲ್ಕ್‌ಬೋರ್ಡ್ ಜಂಕ್ಷನ್ ನಡುವಿನ ರಸ್ತೆಯಲ್ಲಿ ವಾಹನ ಸವಾರರ ಪರದಾಟವಂತೂ ಹೇಳತೀರದ್ದಾಗಿತ್ತು. ಆದರೆ, ಈ ರಸ್ತೆಯಲ್ಲಿ ಓಡಾಡುವ ಸವಾರ–

*** ಬೆಂಗಳೂರಿನಲ್ಲಿ ವಾಹನ ದಟ್ಟಣೆ ಕಡಿಮೆ ಹೇಗಾಯ್ತು**

*** ಪೊಲೀಸರು ತೆಗೆದುಕೊಂಡ ನಿರ್ಧಾರಗಳೇನು**

*** ಇದಕ್ಕೆ ಜನರ ಪ್ರತಿಕ್ರಿಯೆ ಹೇಗಿದೆ ಎಂಬುದರ ಬಗ್ಗೆ ವಿಸ್ತ್ರತ ವರದಿ ಇಲ್ಲಿದೆ ಓದಿ...**

ರಿಗೆ ಬಿಎಂಆರ್‌ಸಿಎಲ್ ಖುಷಿ ಸುದ್ದಿಯನ್ನು ನೀಡಿದೆ.

ಅದೇನೆಂದರೆ, ಮೆಟ್ರೊ ಕಾಮಗಾರಿಯಿಂದ ಸಂಚಾರ ದಟ್ಟಣೆ ಉಂಟಾಗುತ್ತಿದ್ದ ಬಿಟಿಎಂ ಲೇಔಟ್‌ನ ದ್ವಿಮುಖ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಸಲಾಗಿದೆ. ಬಿಟಿಎಂ ಬಡಾವಣೆಯ 16ನೇ ಮುಖ್ಯರಸ್ತೆಯಲ್ಲಿ ಮೆಟ್ರೊ ರೈಲು ಕಾಮಗಾರಿ ನಡೆಯುತ್ತಿತ್ತು. ಈ ಹಿನ್ನೆಲೆಯಲ್ಲಿ, ಮೆಟ್ರೋ ಫ್ಲೈಓವರ್ ಕೆಳಗೆ ಬರುವ ಇಲ್ಲಿನ ದ್ವಿಮುಖ ರಸ್ತೆಯನ್ನು ವಾಹನ ಸಂಚಾರಕ್ಕೆ ನಿಷೇಧಿಸಲಾಗಿತ್ತು. ನಿತ್ಯ ಸಾವಿರಾರು ವಾಹನಗಳು ಓಡಾಡುವ ಈ ರಸ್ತೆಯಲ್ಲಿ ನಿಷೇಧ ಹೇರಿದ್ದರಿಂದ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ, ಮೈಕೋ ಲೇಔಟ್ ಸಂಚಾರ ಠಾಣೆ ಪೊಲೀಸರು, ಬಿಎಂಆರ್‌ಸಿಎಲ್ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ. ನಂತರ ಮೆಟ್ರೊ ಫ್ಲೈಓವರ್ ಕೆಳ ಭಾಗದ ದ್ವಿಮುಖ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಿದ್ದಾರೆ. ಈ ನಿರ್ಧಾರದಿಂದ ಬನಶಂಕರಿ ಹಾಗೂ ಸಿಲ್ಕ್ ಬೋರ್ಡ್ ಜಂಕ್ಷನ್ ನಡುವೆ ಬರುವ ಔಟರ್‌ರಿಂಗ್ ರೋಡಿನ ಟ್ರಾಫಿಕ್ ಜಾಮ್ ತಗ್ಗಿದೆ ಎಂದು ನಾಗರಿಕರು ಹೇಳುತ್ತಿದ್ದಾರೆ.

# 2ನೇ ಟೆಸ್ಟ್ ಡ್ರಾ: ಭಾರತಕ್ಕೆ ಸರಣಿ ಜಯ

**ಪೋರ್ಟ್ ಆಫ್ ಸ್ಪೇನ್:** ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿಯನ್ನು ಕ್ಲೀನ್ ಸ್ವೀಪ್ ಮಾಡಿಕೊಳ್ಳಲು ಹೊರಟಿದ್ದ ಭಾರತಕ್ಕೆ ಮಳೆ ಅಡ್ಡಿಯಾಗಿದ್ದು, ದ್ವಿತೀಯ ಟೆಸ್ಟ್ ಡ್ರಾನಲ್ಲಿ ಕೊನೆಗೊಂಡಿದೆ. ಹೀಗಾಗಿ, ಭಾರತ 1–0 ಅಂತರದಿಂದ ಸರಣಿ ಜಯಿಸಿದೆ.

ಗೆಲುವಿಗೆ 365 ರನ್ನುಗಳ ಕಠಿಣ ಗುರಿ ಪಡೆದಿದ್ದ ವೆಸ್ಟ್ ಇಂಡೀಸ್, 4ನೇ ದಿನದಾಟದ ಮುಕ್ತಾಯಕ್ಕೆ 2 ವಿಕೆಟ್ ಕಳೆದುಕೊಂಡು 76 ರನ್ ಮಾಡಿತ್ತು. ನಾಯಕ ಕ್ರೈಗ್ ಬ್ರಾತ್ ವೇಟ್ (28) ಮತ್ತು ಕರ್ಕ್ ಮೆಕೆಂಜಿ (0) ಭಾನುವಾರವೇ ಔಟಾಗಿದ್ದರು. ತೇಜ್‌ನಾರಾಯಣ್ ಚಂದರ್‌ಪಾಲ್ 24 ಮತ್ತು ಜರ್ಮೈನ್ ಬ್ಲ್ಯಾಕ್‌ವುಡ್ 20 ರನ್ ಮಾಡಿ ಬ್ಯಾಟಿಂಗ್ ಕಾಯ್ದುಕೊಂಡಿದ್ದರು. ಮೊದಲ ಎರಡೂ ವಿಕೆಟ್‌ಗಳನ್ನು ಆರ್. ಅಶ್ವಿನ್ ಉರುಳಿಸಿದರು. ಹೀಗಾಗಿ ಸ್ಪಿನ್ ಭೀತಿಗೆ ಸಿಲುಕಿದ ವಿಂಡೀಸ್ ಅಂತಿಮ ದಿನದಾಟದಲ್ಲಿ ಕ್ಷಿಪ್ರ ಕುಸಿತ ಕಂಡೀತೆಂಬ ನಿರೀಕ್ಷೆ ಭಾರತದ್ದಾಗಿತ್ತು. ಹಾಗೆಯೇ ಇದು 3ನೇ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್ ಶಿಪ್ ಸರಣಿಯಾದ್ದರಿಂದ ಟೀಮ್ ಇಂಡಿಯಾಕ್ಕೆ ಈ ಗೆಲುವು ಅನಿವಾರ್ಯವೂ ಆಗಿತ್ತು. ಆದರೆ, ಕೊಂಚವೂ ಬಿಡುವು ಕೊಡದ ಮಳೆಯಿಂದಾಗಿ ಕಡೇ ದಿನದ ಆಟವನ್ನು ರದ್ದು ಮಾಡಿ ಪಂದ್ಯವನ್ನು ಡ್ರಾನಲ್ಲಿ ಮುಗಿಸಬೇಕಾಯಿತು.

ವೆಸ್ಟ್ ಇಂಡೀಸ್ ವಿರುದ್ಧದ 100 ಟೆಸ್ಟ್ ಪಂದ್ಯವಾಗಿದ್ದ ಇದು ಭಾರೀ ಮಹತ್ವ ಪಡೆದಿತ್ತು. ಅಲ್ಲದೆ, ಮಾಜಿ ನಾಯಕ ಮತ್ತು ಹಿರಿಯ ಆಟಗಾರ ವಿರಾಟ್ ಕೊಹ್ಲಿ ಅವರ 500ನೇ ಅಂತಾರಾಷ್ಟ್ರೀಯ ಪಂದ್ಯವಾಗಿದ್ದು, ಅವರ ಇದೇ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಶತಕ ಬಾರಿಸಿ ಮಿಂಚಿದ್ದರು.

ಜತೆಗೆ, ಭಾನುವಾರವೂ 181 ರನ್‌ಗಳ ಮುನ್ನಡೆಯೊಂದಿಗೆ ಬಿರುಸಿನ ಆಟವಾಡಿ ವೆಸ್ಟ್ ಇಂಡೀಸ್‌ಗೆ 365 ರನ್‌ಗಳ ದೊಡ್ಡ ಮೊತ್ತದ ಗೆಲುವಿನ ಗುರಿ ನೀಡಿತ್ತು. ಅಲ್ಲದೆ ಮಳೆ ಬಿಡುವು ಕೊಟ್ಟಿದ್ದರೆ ಈ ಪಂದ್ಯವನ್ನೂ ಗೆಲ್ಲುವ ಗುರಿಯನ್ನೂ ಭಾರತ ಇರಿಸಿಕೊಂಡಿತ್ತು. ಡೊಮಿನಿಕಾದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ಇನ್ನಿಂಗ್ಸ್ ಹಾಗೂ 141 ರನ್ ಅಂತರದ ಜಯಭೇರಿ, ಮೊಳಗಿಸಿತ್ತು. ಹೀಗಾಗಿ ಸರಣಿ ಭಾರತದ ಪಾಲಾಯಿತು. ಇದೇ 27ರಿಂದ ವಿಂಡೀಸ್ ವಿರುದ್ಧದ ಏಕ ದಿನ ಸರಣಿ ಆರಂಭವಾಗಲಿದೆ.

**ಸಂಕ್ಷಿಪ್ತ ಸ್ಕೋರ್:** ಭಾರತ–438 ಮತ್ತು 2 ವಿಕೆಟಿಗೆ 181 ಡಿಕ್ಲೇರ್ (ರೋಹಿತ್ ಶರ್ಮ 57, ಕಿಶನ್ ಔಟಾಗದೆ 52, ಜೈಸ್ವಾಲ್ 38, ಗಿಲ್ ಔಟಾಗದೆ 29, ಶಾನನ್ ಗ್ಯಾಬ್ರಿಯಲ್ 33ಕ್ಕೆ 1, ವ್ಯಾರಿಕ್ಯಾನ್ 36ಕ್ಕೆ 1). ವೆಸ್ಟ್ ಇಂಡೀಸ್–255 ಮತ್ತು 2 ವಿಕೆಟಿಗೆ76 (ಬ್ರಾತ್‌ವೇಟ್ 28, ತೇಜ್ ನಾರಾಯಣ್ 24, ಬ್ಲ್ಯಾಕ್‌ವುಡ್ 20, ಅಶ್ವಿನ್ 33ಕ್ಕೆ2).



ಭಾರತಕ್ಕೆ ಸರಣಿ ಜಯ

# ಜಪಾನ್ ಓಪನ್: ಸಿಂಧು, ಶ್ರೀಕಾಂತ್‌ಗೆ ಅಗ್ನಿಪರೀಕ್ಷೆ

**ಟೋಕ್ಯೋ:** ಸೂಪರ್ ಸೀರಿಸ್ ಬ್ಯಾಡ್ಮಿಂಟನ್ ಕೂಟದ ಮತ್ತೊಂದು ಆವೃತ್ತ ಮಂಗಳವಾರ ಟೋಕ್ಯೋದಲ್ಲಿ ಆರಂಭ ವಾಗಲಿದೆ. ಇದು ಜಪಾನ್ ಓಪನ್ ಸೂಪರ್–150' ಪಂದ್ಯಾವಳಿಯಾಗಿದ್ದು, ಭಾರತದ ಬಹುತೇಕ ಆಟಗಾರರು ಪಾಲ್ಗೊಳ್ಳಲಿದ್ದಾರೆ. ಇವರಲ್ಲಿ ಸತತ ವೈಫಲ್ಯ ಕಾಣುತ್ತಲೇ ಬಂದಿರುವ ಪಿ.ವಿ. ಸಿಂಧು ಮತ್ತು ಕೆ. ಶ್ರೀಕಾಂತ್ ಅವರಿಗೆ ಇದೊಂದು ಅಗ್ನಿಪರೀಕ್ಷೆ ಆಗಲಿದೆ.

2024ರ ಪ್ಯಾರಿಸ್ ಒಲಿಂಪಿಕ್ಸ್ ಸರಿಯಾಗಿ ಒಂದು ವರ್ಷ ಬಾಕಿ ಇದ್ದು, ಸಿಂಧು ಮತ್ತು ಶ್ರೀಕಾಂತ್ ಅವರ ಕಳಪೆ ಫಾರ್ಮ್ ಭಾರತದ ಪಾಲಿಗೆ ಚಿಂತೆಯ ಸಂಗತಿ ಆಗಿದೆ. ಕಳೆದ ವಾರದ ಕೊರಿಯಾ ಓಪನ್ ಪಂದ್ಯಾವಳಿಯಲ್ಲಿ ತನಗಿಂತ ಕೆಳಗಿನ ಬ್ಯಾಂಕಿಂಗ್ ಆಟಗಾರ್ತಿ ಪೈ ಯು–ಪೊ ವಿರುದ್ಧ ಸೋತದ್ದು ಸಿಂಧುಗೆ



ಎದುರಾಗಿರುವ ಭಾರೀ ಹಿನ್ನಡೆಯಾಗಿದೆ. ಟೋಕಿಯೊದಲ್ಲಾದರೂ ಉತ್ತಮ ಪ್ರದರ್ಶನ ನೀಡಬೇಕಿದೆ.

ಜಪಾನ್ ಓಪನ್‌ನ ಮೊದಲ ಸುತ್ತಿನ ಪಂದ್ಯದಲ್ಲಿ ಸಿಂಧು ಚೀನಾದ ಜಾಂಗ್ ಯಿ ಮಾನ್ ವಿರುದ್ಧ ಸೆಣಸಲಿದ್ದಾರೆ. ಈ 20ನೇ ಬ್ಯಾಂಕಿಂಗ್ ಆಟಗಾರ್ತಿ ವಿರುದ್ಧ ಸಿಂಧು 2–2 ಸಮ ಬಲದ ದಾಖಲೆ ಹೊಂದಿದ್ದಾರೆ. ಕೊನೆಯ ಸಲ ಮುಖಾಮುಖಿಯಾದದ್ದು ಕಳೆದ ಮಲೇಷ್ಯಾ ಓಪನ್ ಕ್ವಾರ್ಟರ್ ಫೈನಲ್‌ನಲ್ಲಿ ಇಲ್ಲಿ ಸಿಂಧು ಜಯ ಸಾಧಿಸಿದ್ದರು. ಟೋಕಿಯೊದಲ್ಲಿ ಮೊದಲ ಸುತ್ತಿನ ಜಯ ಸಾಧಿಸಿದರೆ ಸಿಂಧುಗೆ ತೈ ಜು ಯಿಂಗ್ ಅವರ ಕಠಿನ ಸವಾಲು ಎದುರಾಗುವ ಸಾಧ್ಯತೆ ಇದೆ. ಸಿಂಧು ವಿರುಪ್ಪಯಿಂಗ್ 19–5 ಅಂತರದ ಭರ್ಜರಿ ಗೆಲುವಿನ ದಾಖಲೆ ಹೊಂದಿದ್ದಾರೆ. ಒಮ್ಮೆಯಂತೂ ಸಿಂಧು ಸತತ 9 ಪಂದ್ಯಗಳಲ್ಲಿ ಸೋಲನುಭವಿಸಿದ್ದರು!

ಚಿರಾಗ್–ಸಾತ್ವಿಕ್ ಮತ್ತೊಂದು ನಿರೀಕ್ಷೆ: ಭಾನುವಾರವಷ್ಟೇ ವಿಶ್ವದ ನಂ.1 ಜೋಡಿಯನ್ನು ಮಣಿಸಿ, ಕೊರಿಯಾ ಓಪನ್' ಡಬಲ್ಸ್ ಪ್ರಶಸ್ತಿ ಗೆದ್ದ ಚಿರಾಗ್ ಶೆಟ್ಟಿ–ಸಾತ್ವಿಕ್ ಸಾಯಿರಾಜ್ ರಾಂಕಿ ರೆಡ್ಡಿ ಜೋಡಿ ಇಲ್ಲಿಯೂ ಕಣಕ್ಕಿಳಿಯಲಿದೆ. ಇವರ ಫಾರ್ಮ್ ಟೋಕ್ಯೋದಲ್ಲೂ ಮುಂದುವರಿಯುವುದೆಂಬ ನಿರೀಕ್ಷೆ ಅಭಿಮಾನಿಗಳದ್ದು, 3ನೇ ಶ್ರೇಯಾಂಕದ ಭಾರತೀಯ ಜೋಡಿ ಇಂಡೋನೇಷ್ಯಾದ ಲಿಯೋ ರೋಲಿ ಕಾರ್ನಾಂಡೊ–ಡೇನಿಯಲ್ ಮಾರ್ಟಿನ್ ವಿರುದ್ಧ ಮೊದಲ ಸುತ್ತಿನ ಪಂದ್ಯ ಆಡಲಿದೆ. ಮಲೇಷ್ಯಾ ಮಾಸ್ಟರ್ ಚಾಂಪಿಯನ್ ಪ್ರಣಯ್ 8ನೇ ಶ್ರೇಯಾಂಕ ಪಡೆದಿದ್ದು, ಚೀನದ ಶ್ರೇಯಾಂಕ ರಹಿತ ಆಟಗಾರ ಲಿ ಶಿ ಫೆಂಗ್ ಅವರನ್ನು ಎದುರಿಸುವರು. ಕೆ. ಶ್ರೀಕಾಂತ್ ಚೈನೀಸ್ ತೈಪೆಯ ಚೌ ಟೀನ್ ಚೆನ್ ವಿರುದ್ಧ ಆಡಲಿದ್ದಾರೆ.

ಮರಳಿದ ಲಕ್ಷ್ಯ ಸೇನ್: ಕೊರಿಯಾ ಓಪನ್‌ನಲ್ಲಿ ಬ್ರೇಕ್ ಪಡೆದಿದ್ದ ಇನ್‌ಫಾರ್ಮ್ ಶಟ್ಲರ್ ಲಕ್ಷ ಸೇನ್ ಮರಳಿ ಕಣಕ್ಕೆ ಇಳಿಯಲಿದ್ದಾರೆ.




**ವರುಣ್ ಎಸ್ :**
**ಹುಟ್ಟಿ ಸಾಯೋದು ಮನುಷ್ಯ,**
**ಹುಟ್ಟದೇ ಸಾಯದವನು ದೇವರು,**
**ಬೇರೆಯವರನ್ನು ಸಾಯಿಸುವುದು ಪ್ರೀತಿ,**
**ಆದರೆ ಸಾಯೋರನ್ನು ಕೂಡ ಕೈ ಹಿಡಿದು ಬದುಕಿಸುವುದು ಸ್ನೇಹ ಮಾತ್ರ..**

Chief Editor:
Prof N Narasimhamurthy,
Head of the Department,
Mass Communication
and Journalism.

Faculty Editors:
Bansi kalappa

Student Editors:
Vijayakumara M
Sapthagiri S

Printer and Publisher: The Chairman, Department of Mass Communication and Journalism, P.K.Block, Palace Road, Bengaluru-56009, Karnataka.